
**ವಲಸೆ ಎನ್ನುವುದು ಆಧುನಿಕ ನಾಗರಿಕತೆಯ ಮುಖ್ಯ ಲಕ್ಷಣವೂ ಹೌದು, ಹೊರಗೆ ಸುಲಭವಾಗಿ ಕಾಣಿಸುವ ಲಕ್ಷಣಗಳಿಲ್ಲದ ರೋಗವೂ ಹೌದು. ಇರುವುದೆಲ್ಲವ ಬಿಟ್ಟು ಇನ್ನಾವುದಕ್ಕೋ ಹಂಬಲಿಸುತ್ತಲೇ ಊರುಬಿಟ್ಟು ಬಂದವರ ಪಾಡನ್ನು ಧ್ವನಿಸುವ ಅನುಭವ ಕಥನ, ನಮ್ಮೆಲ್ಲರ ಮನಸಿನ ಆಳದ ಸಿಕ್ಕುಗಳನ್ನು ನಮಗೇ ಕಾಣಿಸುವಂತಿದೆ.**

**■ ವಿನಯ್ ರಾಜ್**



ಒಂದು ಬದಿ ಕಡಲು, ಇನ್ನೊಂದು ಬದಿ ಊರ ಒಡಲು. ತಾಯಗರ್ಭದ ಪ್ರತಿರೂಪಗಳಂತಹ ಕಡಲು ಮತ್ತು ಊರನ್ನೊಳಗೊಂಡ ಈ ಕಲಾಕೃತಿ ಮನುಷ್ಯನ ಅವಿಶ್ರಾಂತ ಚಲನಶೀಲತೆಯ ರೂಪಕದಂತೆ ಹಾಗೂ ಅಲೆಮಾರಿಗಳ ನಿಟ್ಟುಸಿರುಗಳ ಅಭಿವ್ಯಕ್ತಿಯಂತೆಯೂ ಕಾಣಿಸುತ್ತದೆ.

ನನಗೆ ಮುಂಚಿತವಾಗಿ ಬೇಕಾಗಬಹುದು ಎಂದು ನಿಮ್ಮ ಹೆಲ್ಪ್ ಡೆಸ್ಕಿನವರಿಗೆ ತಿಳಿಸಿದ್ದೆ. 12 ಗಂಟೆಯಿಂದ ನನಗೆ ವೀಸಾ ಬಯೋಮೆಟ್ರಿಕ್ಸ್ ಅಪಾಯಿಂಟಮೆಂಟ್ ಇದೆ' ಎಂದು ಇಂಗ್ಲಿಷಿನಲ್ಲಿ ಹೋಟೆಲ್ ರಿಸೆಪ್ಷನ್‌ನಲ್ಲಿದ್ದವನಿಗೆ ಹೇಳಿದೆ. ನಿಗದಿತ ಸಮಯಕ್ಕೂ ಮುಂಚಿತವಾಗಿ ರೂಮ್ ಬೇಕಾದರೆ ಅರ್ಧ ದಿನದ ಬಾಡಿಗೆ ಅಧಿಕವಾಗುವುದು ಎಂದು ಸಾರಾಸಗಟಾಗಿ ನನ್ನ ಮನವಿಯನ್ನು ತಳ್ಳಿಹಾಕಿದ. ಈಗಾಗಲೇ ಚೆನ್ನೈನ ಬಿಸಿಲಿಗೆ ಮೈಯೆಲ್ಲಾ ಬೆವರು ಹತ್ತಿ ಆ ಇಡೀ 5* ಹೋಟೆಲಿನಲ್ಲಿ ಗುಂಪಿಗೆ ಸೇರದ ಪದವೆಂಬಂತೆ ಕಾಣುತ್ತಿದ್ದ ನನಗೆ ಫ್ರೆಶ್ ಆಗಿ ಸ್ವಲ್ಪ ವಿಶ್ರಮಿಸಲು ಒಂದು ರೂಮ್ ಬೇಕಿತ್ತು. ಹೆಚ್ಚಾಗಿ ವಾದಿಸದೆ 'ಓಕೆ' ಎಂದು ರೂಮ್ ಕೀಲಿ ತೆಗೆದುಕೊಂಡು ಹೊರಟೆ.

ನಾನು ಬೆಂಗಳೂರಿಂದ ಹೊರಟಾಗ ಬೆಳಗ್ಗೆ 6 ಗಂಟೆ. ಮನೆಯಿಂದ ಹೊರಟದ್ದು 3.30ರ ನಸುಕಿನಲ್ಲಿ. ಹೋಟೆಲ್ ತಲುಪಿದಾಗ 8.45. ರೂಮಿಗೆ ಬಂದೊಡನೆಯೇ ಮಲಗಿದೆ. ಎಚ್ಚರವಾದಾಗ 11 ಗಂಟೆ. 12ಕ್ಕೆ ಬಯೋಮೆಟ್ರಿಕ್ಸ್ ಅಪಾಯಿಂಟಮೆಂಟ್‌ಗೆ ತೆರಳಬೇಕಿತ್ತು. ಇನ್ನು ಒಂದೇ ಗಂಟೆ ಸಮಯ ಇದ್ದುದರಿಂದ ರಿಸೆಪ್ಷಶನ್‌ಗೆ ಫೋನಾಯಿಸಿ ಕ್ಯಾಬ್ ಬೇಕೆಂದು ತಿಳಿಸಿ ಬೇಗನೆ ಫ್ರೆಶ್ ಅಪ್ ಆಗಲು ಹೊರಟೆ.

**'Good afternoon sir. Bio metrics you have to go sir?'** ಎಂದು ಜರ್ಜರಿತ ಇಂಗ್ಲಿಷಿನಲ್ಲಿ ಕೆದರಿದ ಕೂದಲಿನ ದಢೂತಿ ಆಕೃತಿಯೊಂದು ಕೇಳಿತು. 'ಯೆಸ್' ಎಂದು ಕ್ಯಾಬ್ ಹತ್ತಿದೆ. ಅವನ ವೇಷ ಭೂಷಣಗಳಿಗೂ, ಮಾತಿನ ಧಾಟಿಗೂ ಸಾಮ್ಯವಿರಲಿಲ್ಲ. 'ನಿಮ್ದು ಬೆಂಗಳೂರ ಸರ್?' ಎಂದು ತಮಿಳು ಮಿಶ್ರಿತ ಕನ್ನಡದಲ್ಲಿ ಕೇಳಿದ. 'ಹೌದು. ನಿಮಗೆ ಹೇಗೆ ತಿಳಿಯಿತು?' ಎಂದು ಕೇಳಿದೆ. 'ಇಲ್ಲಿ ಬರೋರೆಲ್ಲ ಬೆಂಗ್ಳೂರೋರೆ ಸರ್. ನಾನು ಬೆಂಗ್ಳೂರವ್ನೆ. ಶ್ರೀನಗರದಲ್ಲಿ ನಮ್ಮನೆ. ಇಲ್ಲಿ ಬೆಂಗ್ಳೂರೋರು ಬಂದಾಗೆಲ್ಲ ತುಂಬಾ ಖುಷ್ಯಾಗಿ ಕನ್ನಡ ಮಾತಾಡ್ತೀನಿ' ಎಂದು ಒಂದೇ ಉಸಿರಲ್ಲಿ ನುಡಿದ. ಚೆನ್ನೈನಲ್ಲಿ ಕನ್ನಡ ಮಾತಾಡುವುದಲ್ಲದೆ ಪದ್ಮನಾಭನಗರದ ನಿವಾಸಿಯಾದ ನನಗೆ ಮೂರು ಕಿಲೋಮೀಟರು ಅಂತರದ ಶ್ರೀನಗರದ ಡ್ರೈವರ್ ಸಿಗುವುದೆಂದರೆ ಪರಮಾಶ್ಚರ್ಯವೇ ಹೌದು. ಬಹಳಷ್ಟು ತಮಿಳಿಗರು ಕೆಲಸದ ನಿಮಿತ್ತ ಬೆಂಗಳೂರಿಗೆ ಬರುವುದು ವಾಡಿಕೆ. ಆದರೆ ಅಷ್ಟಾಗಿ ಕನ್ನಡಿಗರು ಚೆನ್ನೈಗೆ ಹೋಗುವುದಿಲ್ಲ. ಮೇಲಾಗಿ ಅವನ ಮಾತು ಕನ್ನಡದ್ದೇ ಆಗಿದ್ದರೂ ಅದರ